# 'ನಿನ್ನ ಏಳಿಗೆಗೆ ನೀನೇ ಶಿಲ್ಪಿ'

ಸ್ವಾಮಿ ಶಾಂತಿವ್ರತಾನಂದ

ಒಂದು ಸತ್ಯಕಥೆಯನ್ನಾಧರಿಸಿ ಸ್ವಾಮೀಜಿಯವರ ವಿಚಾರವನ್ನು ಈ ಲೇಖನದಲ್ಲಿ ಮನದಟ್ಟು ಮಾಡಿಕೊಡಲಾಗಿದೆ. ಯುವ ಜನತೆ ಮೈಗೂಡಿಸಿಕೊಳ್ಳಬೇಕಾದ ಆತ್ಮಶ್ರದ್ಧೆ ಒಂದು ಅಸಾಧಾರಣ ಗುಣವೆಂಬುದು ಇಲ್ಲಿ ಬಿಂಬಿತವಾಗಿದೆ. ಲೇಖಕರು ಮೈಸೂರು ಶ್ರೀರಾಮಕೃಷ್ಣ ಆಶ್ರಮದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.



''ಸಂಪೂರ್ಣ ಜವಾಬ್ದಾರಿಯನ್ನು ನಿನ್ನ ಕೈಯ್ಯಲ್ಲಿ ತೆಗೆದುಕೋ. ಏಕೆಂದರೆ ನಿನ್ನ ಏಳಿಗೆಗೆ ನೀನೇ ಶಿಲ್ಪಿ. ನೀನು ಯಶಸ್ಸನ್ನು ಪಡೆಯಲು ಬೇಕಾದ ಶಕ್ತಿ ಮತ್ತು ನೆರವು ನಿನ್ನಲ್ಲೇ ಹುದುಗಿದೆ.''

— ಸ್ವಾಮಿ ವಿವೇಕಾನಂದ

ಸಮಾಜದಲ್ಲಿ ಪ್ರಸಿದ್ಧ ವ್ಯಕ್ತಿಗಳನ್ನು ನೋಡಿದಾಗ, ನಾವೂ ಅವರಂತೆಯೇ ಆಗಬೇಕು ಎಂದು ಆಶಿಸುತ್ತೇವೆ, ಬಯಸುತ್ತೇವೆ. ಸ್ವಲ್ಪಮಟ್ಟಿಗೆ ಪ್ರಯತ್ನವನ್ನೂ ಮಾಡುತ್ತೇವೆ. ಸವಾಲುಗಳು, ವಿಘ್ನಗಳು ಎದುರಾದಾಗ ಕೈಚೆಲ್ಲಿ ಕುಳಿತುಬಿಡುತ್ತೇವೆ. ಆದರೆ ಕೆಲವರು ಮಾತ್ರ ಅದನ್ನು ಮೆಟ್ಟಿ ನಿಲ್ಲುತ್ತಾರೆ, ಮುಂದೆ ಸಾಗುತ್ತಾರೆ. ಅಂತಹವರು ಮಾತ್ರ ತಮ್ಮ ಗುರಿಯನ್ನು ಸೇರಿ ಯಶಸ್ವಿ ವ್ಯಕ್ತಿಗಳಾಗುತ್ತಾರೆ. ಇನ್ನು ಉಳಿದ ಸಾಮಾನ್ಯ ಜನರು ನಮ್ಮ ಹಣೆಬರಹ, ವಿಧಿಯ ಲಿಖಿತ, ದೇವರ ಇಚ್ಛೆ ಎಂಬ ಕಾರಣಗಳನ್ನು ನೀಡಿ ಜೀವನದ ಪಯಣದಲ್ಲಿ ಸುಲಭವಾಗಿ ಸೋಲನ್ನು ಒಪ್ಪಿಕೊಂಡು ಬಿಡುತ್ತಾರೆ. ಜೀವನದ ಜೊತೆ ರಾಜಿಮಾಡಿಕೊಂಡು ಬಿಡುತ್ತಾರೆ. ಇನ್ನು ಕೆಲವರು 'ನಾನು ಅಂತಹವರ ಮನೆಯಲ್ಲಿ ಹುಟ್ಟಿದ್ದರೆ ಸಾಧಿಸಿಬಿಡುತ್ತಿದ್ದೆ; ಇಂತಹ ಅವಕಾಶಗಳು ನನಗೆ ದೊರೆತಿದ್ದರೆ ನಾನು ಜೀವನದಲ್ಲಿ ಮುಂದೆ ಸಾಗುತ್ತಿದ್ದೆ' — ಮುಂತಾದ ಆಲೋಚನೆಗಳು, ಮಾತುಗಳನ್ನು ಆಡುವುದನ್ನು ನಾವು ಕೇಳುತ್ತಿರುತ್ತೇವೆ. ಆದರೆ ಗುರಿಯನ್ನು ಸಾಧಿಸಿರುವ ವ್ಯಕ್ತಿಯನ್ನು ಗಮನಿಸಿದರೆ, ಅವನು ಅವಕಾಶಗಳಿಗೆ ಕಾಯುವುದಿಲ್ಲ, ಬದಲಾಗಿ ಅವಕಾಶಗಳನ್ನು ಸೃಷ್ಟಿಸಿಕೊಳ್ಳುತ್ತಾನೆ. ಅಲ್ಲದೆ ಸಿಕ್ಕ ಅವಕಾಶಗಳನ್ನು ಸಂಪೂರ್ಣವಾಗಿ, ಶಕ್ತಿಮೀರಿ ಉಪಯೋಗಿಸಿಕೊಳ್ಳುತ್ತಾನೆ ಎಂಬ ಸತ್ಯ ಗೋಚರವಾಗುತ್ತದೆ.

ಸಾಮಾನ್ಯ ಜನರು ಕಷ್ಟಗಳಿಗೆ ಹೆದರಿ, ಕೆಲಸಗಳನ್ನು ಪ್ರಾರಂಭಿಸುವುದಿಲ್ಲ. ಮಧ್ಯಮ ರೀತಿಯ ಜನರು ಕೆಲಸಗಳನ್ನು ಪ್ರಾರಂಭಿಸುತ್ತಾರೆ. ಕಷ್ಟಗಳು ಬಂದಾಗ, ಮಧ್ಯದಲ್ಲೇ ಬಿಟ್ಟುಬಿಡುತ್ತಾರೆ. ಉತ್ತಮ ಜನರು ಒಮ್ಮೆ ಕೆಲಸವನ್ನು ಪ್ರಾರಂಭಿಸಿದರೆ, ಎಷ್ಟೇ ಕಷ್ಟಗಳು, ಸವಾಲುಗಳು ಬಂದರೂ, ಹಿಡಿದ ಕೆಲಸವನ್ನು ಬಿಡದೆ ಸಾಧಿಸುತ್ತಾರೆ.

ಆದ್ದರಿಂದ ಜೀವನದಲ್ಲಿ ಏನನ್ನಾದರೂ ಸಾಧಿಸಬೇಕಾದರೆ, ನಮಗೆ ಛಲವಿರಬೇಕು. ಎದೆಗಾರಿಕೆ ಹಾಗೂ ಆತ್ಮವಿಶ್ವಾಸವಿರಬೇಕು. ಈ ಗುಣಗಳು ನಮ್ಮ ವ್ಯಕ್ತಿತ್ವದ ಅಂಗವೇ ಹೊರತು, ಹೊರಗೆ ಸಿಗುವಂತಹುದಲ್ಲ. ನಮ್ಮ ಆಲೋಚನೆ, ಸಂಸ್ಕಾರ, ಶ್ರಮವೇ ಕಾರಣ. ಆದ್ದರಿಂದಲೇ ಸ್ವಾಮಿ ವಿವೇಕಾನಂದರು, **'ನಿನ್ನ ಏಳಿಗೆಗೆ ನೀನೇ ಶಿಲ್ಪಿ'** ಎಂದರು.

ಇಂದಿನ ಯುವಕ–ಯುವತಿಯರಿಗೆ ಯಶಸ್ಸು ಎನ್ನುವುದು ಬಹುಬೇಗನೆ ಸುಲಭವಾಗಿ ಸಿಗಬೇಕು. ಹೆಚ್ಚು ಶ್ರಮ ಬೇಡ. ಸಾಮಾನ್ಯ ವ್ಯಕ್ತಿಗೂ, ಅಸಮಾನ್ಯ ವ್ಯಕ್ತಿಗೂ ಇರುವ ವ್ಯತ್ಯಾಸವೆಂದರೆ ಅಕಾರ ಮಾತ್ರ. ಇಲ್ಲಿ ಅಕರಾವೆಂದರೆ ಸಾಧಿಸುವ ಛಲ, ಹಠ. ಇದು ಒಬ್ಬ ವ್ಯಕ್ತಿಯಲ್ಲಿದ್ದರೆ ಅವನು ಅಥವಾ ಅವಳು ಏನನ್ನಾದರೂ ಸಾಧಿಸಬಹುದು.

ನಮ್ಮ ಕಥಾನಾಯಕಿ ಹುಟ್ಟು ಕುರುಡಿ. ಅವಳು ಬಾಲ್ಯದಲ್ಲಿ ತಂದೆ–ತಾಯಿಗಳನ್ನು ಕಳೆದುಕೊಂಡಳು. ಅವಳನ್ನು ನೋಡಿಕೊಳ್ಳು

ತ್ತಿದ್ದವರು ಎಂದರೆ ಅಜ್ಜಿ. ಅವರಿಗಾದರೂ ಮಾತನಾಡಲು ಬರುತ್ತಿರಲಿಲ್ಲ, ಕಿವಿ ಕೇಳಿಸುತ್ತಿರಲಿಲ್ಲ. ಚಿಕ್ಕ ವಯಸ್ಸಿನಲ್ಲೇ ಅಂಧ ಮಕ್ಕಳ ಶಾಲೆಯನ್ನು ಇವಳು ಸೇರಿಕೊಂಡಳು. ೧೫೦೦ ಮೀಟರ್ ಓಡುವ ಸ್ಪರ್ಧೆ. ಆ ಸ್ಪರ್ಧೆ ಅಂತರರಾಷ್ಟ್ರೀಯ ಮಟ್ಟದಲ್ಲಿ ನಡೆಯುತ್ತಿದ್ದುದರಿಂದ ಅದರಲ್ಲಿ ೪೩ ದೇಶಗಳಿಂದ ಸ್ಪರ್ಧಿಗಳು ಭಾಗವಹಿಸಿದ್ದರು. ಅವರ ನಡುವೆ ನಮ್ಮ ನಾಯಕಿ ಬಂಗಾರದ ಪದಕವನ್ನು ಪಡೆದುಕೊಂಡೇಬಿಟ್ಟಳು. ಅವಳು ಎಂತಹ ಹೋರಾಟಗಾರ್ತಿ ಇರಬಹುದು ಅಲ್ಲವೆ? 'ಛಲವೊಂದಿದ್ದರೆ ಸಾಧನೆಗಳು ನಮ್ಮ ಕಾಲುಬುಡದ ಬಳಿ' ಎಂಬಂತಿತ್ತು ಕುಮಾರಿ ರಕ್ಷಿತಾಳ ಸಾಧನೆ.

ಕು. ರಕ್ಷಿತಾ ರಾಜು ಇವಳ ಊರು ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲ್ಲೂಕಿನ ಬಾಳೂರು ಸಮೀಪದ ಗುಡ್ನಳ್ಳಿ ಎಂಬ ಹಳ್ಳಿ. ಇವಳ ವಯಸ್ಸು ೧೭ ವರ್ಷ. ಸುಮಾರು ೮ ವರ್ಷಗಳ ಹಿಂದೆ ಚಿಕ್ಕಮಗಳೂರಿನಲ್ಲಿರುವ ಆಶಾಕಿರಣ ಅಂಧ ಮಕ್ಕಳ ಶಾಲೆಯನ್ನು ಸೇರಿದಳು. ಇವಳು ಸಾಮಾನ್ಯ ವಿದ್ಯಾರ್ಥಿನಿಯಂತೆ ತನ್ನ ವಿದ್ಯಾಭ್ಯಾಸವನ್ನು ಮಾಡುತ್ತಿದ್ದಳು. ಆಟದ ಮಾತು ಬಹಳ ದೂರ ಇವಳಿಗೆ. ಒಮ್ಮೆ ೨೦೧೪ರಲ್ಲಿ ತಾನು ಓದುತ್ತಿದ್ದ ಶಾಲೆಯಲ್ಲಿ ಶವಾದ್ ಎಂಬ ಹುಡುಗನ ಸಾಧನೆಯನ್ನು ಕೇಳುತ್ತಾಳೆ. ಅದರಿಂದ ಉತ್ತೇಜನಗೊಂಡ ರಕ್ಷಿತಾ ತಾನು ಒಬ್ಬ ಶ್ರೇಷ್ಠ ಆಟಗಾರ್ತಿ ಆಗಬೇಕು ಎಂಬ ಕನಸನ್ನು ಕಟ್ಟಿಕೊಂಡು, ದೃಢಸಂಕಲ್ಪವನ್ನು ಮಾಡುತ್ತಾಳೆ. ಆದರೆ ರಕ್ಷಿತಾ ಅಂದಿನಿಂದ ಬರಿ ಕನಸನ್ನು ಕಾಣುತ್ತಾ ಕೂರಲಿಲ್ಲ, ಬದಲಾಗಿ ಕಾರ್ಯಪ್ರವೃತ್ತಳಾದಳು. ಅಂದಿನಿಂದ ಪ್ರತಿನಿತ್ಯ ಓಡುವ ಅಭ್ಯಾಸವನ್ನು ಪ್ರಾರಂಭಿಸಿಯೇ ಬಿಟ್ಟಳು. ಶವಾದ್‌ನಂತೆ ತಾನು ಜಯಗಳಿಸಬೇಕೆಂದು ಸಂಕಲ್ಪಿಸಿದ್ದಳು. ಪ್ರತಿನಿತ್ಯ ಓಡುವ ಅಭ್ಯಾಸವನ್ನು ನಿರಂತರವಾಗಿ ಮಾಡಿದಳು. ಇವಳಿಗೆ ವಿಜಯಶ್ರೀ ಒಲಿಯಿತು. ಹಂತಹಂತವಾಗಿ, ವಿವಿಧ ಮಟ್ಟಗಳಲ್ಲಿ ವಿಜೇತಳಾದಳು. ೨೦೧೪ರಲ್ಲಿ ರಾಷ್ಟ್ರ ಮಟ್ಟದಲ್ಲಿ ರಕ್ಷಿತಾಳಿಗೆ ಅವಕಾಶ ದೊರೆಯಿತು. ಇವಳ ಉತ್ಸಾಹ, ಛಲವನ್ನು ಕಂಡು ಗೈಡ್ ರನ್ನರ್ ರಾಹುಲ್‌ರವರು ವಿಸ್ಮಿತರಾದರು. ರಕ್ಷಿತಾಳಿಗೆ ಹೆಚ್ಚಿನ ತರಬೇತಿಯನ್ನು ನೀಡಿದರೆ, ಇವಳು ರಾಷ್ಟ್ರ ಮಟ್ಟದಿಂದ ಅಂತರರಾಷ್ಟ್ರೀಯ ಮಟ್ಟಕ್ಕೆ ಹೋಗುತ್ತಾಳೆಂದು ಅರಿತರು. ರಾಹುಲ್‌ರವರು ಸ್ಪರ್ಧೆ ಮುಗಿದ ಮೇಲೆ ರಕ್ಷಿತಾಳನ್ನು ಬೆಂಗಳೂರಿಗೆ ಕರೆದುಕೊಂಡು ಬಂದರು. ಸಾಯಿ ಸ್ಪೋರ್ಟ್ಸ್ ಕ್ಲಬ್‌ನಲ್ಲಿ ಟ್ರೈನಿಂಗ್ ಪ್ರಾರಂಭಿಸಿದರು. ಗುರುಗಳ ಆದೇಶವನ್ನು ಚಾಚೂತಪ್ಪದೆ ರಕ್ಷಿತಾ ಪಾಲಿಸಿದಳು. ಪ್ರತಿನಿತ್ಯ ಅಭ್ಯಾಸವನ್ನು ಮಾಡಿದಳು. ನಾವು ಪ್ರಾಮಾಣಿಕವಾಗಿ ಸರಿಯಾಗಿ ಪ್ರಯತ್ನ ಮಾಡಿದರೆ, ಫಲ ಸಿಕ್ಕೇ ಸಿಗುತ್ತದೆ ಎಂಬಂತೆ ರಕ್ಷಿತಾಳಿಗೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಪಾಲ್ಗೊಳ್ಳುವ ಅವಕಾಶ ಕೊಂಚ ಸಮಯದಲ್ಲಿ ದೊರೆಯಿತು.

ಏಷಿಯನ್ ಪ್ಯಾರಾ ಒಲಂಪಿಕ್ಸ್ ೨೦೧೮ರಲ್ಲಿ ಜಕಾರ್ತಾದಲ್ಲಿ ನಡೆಯಿತು. ಅಲ್ಲಿ ಅರ್ಹತಾ ಸುತ್ತಿನಲ್ಲಿ ರಕ್ಷಿತಾಳಿಗೆ ಅವಕಾಶ ದೊರೆಯಿತು. ಅವಕಾಶವನ್ನು ಸದುಪಯೋಗಪಡಿಸಿಕೊಂಡ ರಕ್ಷಿತಾ ಆಯ್ಕೆಯಾದಳು. ಪ್ಯಾರಾ ಒಲಂಪಿಕ್ಸ್‌ನ ಸ್ಪರ್ಧೆಗೆ ಹೋದಾಗ, ರಕ್ಷಿತಾಳಿಗೆ ಕೊಂಚ ಹೆದರಿಕೆ ಉಂಟಾಯಿತು. ಕಾರಣ, ಅಲ್ಲಿ ೪೩ ದೇಶದ ಉತ್ತಮ ಆಟಗಾರರು ಭಾಗವಹಿಸುತ್ತಿದ್ದಾರೆ ಎಂದು ತಿಳಿದು. ರಕ್ಷಿತಾಳು ತನ್ನ ಸ್ಪರ್ಧೆಯಿಂದ ಹಿಂದೆ ಸರಿಯುವುದಾಗಿ ತನ್ನ ಗುರುವಿನ ಬಳಿ ಹೇಳಿದಳು. ಗುರುವಾಗಿದ್ದ ರಾಹುಲ್‌ರವರು ರಕ್ಷಿತಾಳಿಗೆ ಧೈರ್ಯವನ್ನು, ಆತ್ಮವಿಶ್ವಾಸವನ್ನು ತುಂಬಿದರು. ''ಬೇರೆಯವರಿಗೆ ಸಾಧ್ಯವಾಗುವುದಾದರೆ ನಿನಗೇಕೆ ಸಾಧ್ಯವಿಲ್ಲ? ಎಲ್ಲಿ ಹೋಯಿತು ನಿನ್ನ ಛಲ, ನಿನ್ನ ಹಠ, ನಿನ್ನ ಜಿದ್ದು?'' ಎಂದು ಗುರುಗಳು ನೆನಪಿಸಿದರು. ಈಗ ಮತ್ತೊಮ್ಮೆ ರಕ್ಷಿತಾಳ ಸಾಹಸ ಪ್ರವೃತ್ತಿ, ಛಲವು ಉಕ್ಕಿಹರಿಯಿತು. ಪ್ರತಿಫಲವಾಗಿ ಅವಳು ಆತ್ಮವಿಶ್ವಾಸವನ್ನು ತಳೆದು ಆಟದಲ್ಲಿ ಭಾಗವಹಿಸಿದಳು. ಆಕೆ ಉತ್ತಮ ಪ್ರದರ್ಶನವನ್ನು ನೀಡಿದಳು. ಬಂಗಾರದ ಪದಕ ಅವಳನ್ನು ಹಿಂಬಾಲಿಸಿತು.

೧೫೦೦ ಮೀ ಓಟದ ಸ್ಪರ್ಧೆಯಲ್ಲಿ ರಕ್ಷಿತಾಳು ಪ್ರಥಮ ಸ್ಥಾನವನ್ನು ಗಳಿಸಿದಳು. 'ಗೋಲ್ಡನ್ ಗರ್ಲ್' – 'ಬಂಗಾರದ ರಾಣಿ' ಎಂಬ ಬಿರುದನ್ನು ಪಡೆದಳು. ಈಗ ೨೦೨೦ರಲ್ಲಿ ನಡೆಯುವ ಅಂಧರ ವಿಶ್ವಕಪ್‌ಗಾಗಿ ಈಕೆ ತಯಾರಿ ಮಾಡುತ್ತಿದ್ದಾಳೆ. ಇವಳ ಸಾಧನೆಗೆ ದೇಶದ ಪ್ರಧಾನಿ ಕೂಡ ಟ್ವೀಟ್ ಮೂಲಕ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. 'ನಿನ್ನ ಏಳಿಗೆಗೆ ನೀನೇ ಶಿಲ್ಪಿ' ಎಂಬ ಸ್ವಾಮಿ ವಿವೇಕಾನಂದರ ಮಾತನ್ನು ರಕ್ಷಿತಾ ಅಕ್ಷರಶಃ ಪಾಲಿಸಿದ್ದಾಳೆ.

ಅವಳು ಬಾಲ್ಯದಲ್ಲಿಯೇ ತನ್ನ ತಂದೆ-ತಾಯಿಯನ್ನು ಕಳೆದುಕೊಂಡಳು. ಹುಟ್ಟಿ ಕೆಲವೇ ವರ್ಷಗಳಲ್ಲೇ ತನ್ನ ಅಜ್ಜಿಯನ್ನೂ ಕಳೆದುಕೊಂಡಳು. ಹುಟ್ಟು ಕುರುಡಿ ಬೇರೆ. ಆದರೂ ವಿಶ್ವಮಟ್ಟದ ಸ್ಪರ್ಧೆಯಲ್ಲಿ ಭಾಗವಹಿಸಿ ಪ್ರಥಮ ಸ್ಥಾನವನ್ನು ಪಡೆಯಲು ಅವಳಿಗೆ ತನ್ನ ಛಲ, ಆಶಯ, ಕನಸು, ನಿರಂತರ ಪರಿಶ್ರಮಗಳೇ ಕಾರಣ. ಅವಳು ತಾನು ಅಂಗವಿಕಲೆ ಎಂದು ಎಲ್ಲೂ ದುಃಖಿಸಲಿಲ್ಲ, ಪ್ರಾರಬ್ಧವನ್ನು, ದೇವರನ್ನು ಅಥವಾ ಹಿರಿಯರನ್ನು ಹಳಿಯಲಿಲ್ಲ. ಬದಲಾಗಿ, ತನಗೆ ಸಾಧ್ಯವಾದ ಮಟ್ಟಿಗೆ ಜೀವನದ ಸಂಗ್ರಾಮದಲ್ಲಿ ಹೋರಾಡಿದಳು, ಯಶಸ್ಸನ್ನು ಪಡೆದಳು. ನಮ್ಮ ಯುವಸಮೂಹಕ್ಕೆ ಇದು ಜೀವನದ ಪಾಠವಾಗಬೇಕು.

ಓ ಮಾನವ, ದೇವರ ಮಗು ನೀನು
ಅಮೃತ ಪುತ್ರನು ನೀನು,
ನಿನ್ನ ಉದ್ಧಾರ ನೀನೇ ಮಾಡಿಕೊ.
ಪರರು ನಿನ್ನನು ಉದ್ಧಾರ ಮಾಡುವರು
ಎಂಬ ಭ್ರಮೆ ಯಾಕೊ,
ಕೀಳರಿಮೆಯ ತೊರೆದು, ದೌರ್ಬಲ್ಯವನು ಸರಿಸಿ
ಧೀರವಂತನು ನಾನು ಎಂದು ಮುಂದೆ ಸಾಗು!
ಮುಂದೆ ಸಾಗು!